ಮಗಳ ಪಕ್ಕದಲ್ಲೇ ಮಲಗಿ ಅವಳನ್ನು ಎದೆಗವುಚಿಕೊಂಡು ಹಣೆಗೆ ಮುತ್ತಿಟ್ಟಳು.

ಬೆಳಗ್ಗೆ ಕೆಲಸಕ್ಕೆ ಬಂದಿದ್ದ ಸಂಜನಾಳನ್ನು ನೋಡಿ ನಂದಿತಾಗೆ ಆಶ್ಚರ್ಯವಾಯಿತು.

"ಇದೇನೇ ಸಂಜನಾ ಇವತ್ತೂ ನೀನು ರಜೆ ಹಾಕುತ್ತೀಯಾ ಎಂದುಕೊಂಡಿದ್ದೆ. ಎಲ್ಲಿಗೆ ಬಂತು ನಿನ್ನೆಯ ವಿಚಾರ? ನಿಮ್ಮ ಮುಂದಿನ ಯೋಜನೆ ಏನು?" ಎಂದು ಕೇಳಿದಳು.

ಸಂಜನಾಳಿಂದ ತಕ್ಷಣವೇ ಬಂತು ಉತ್ತರ, "ವಿಚ್ಛೇದನ."

ಒಂದು ಕ್ಷಣ ಸಂಜನಾಳನ್ನೇ ದೃಷ್ಟಿಸಿದ ನಂದಿತಾ, "ಏನೇ ಇದು, ಏನೋ ಆಗುತ್ತೆ ಎಂದುಕೊಂಡರೆ ಇನ್ನೇನೋ ಆಯ್ತಲ್ಲೆ."

"ಹೌದು ನಂದಿತಾ. ಶಶಿಧರ ನನ್ನನ್ನು ಹುಡುಕಿಕೊಂಡು ಬಂದದ್ದು ನಾನಂದುಕೊಂಡಂತೆ ಪಶ್ಚಾತ್ತಾಪದಿಂದ ಅಲ್ಲ. ಬದಲಿಗೆ ಸ್ವಾರ್ಥದಿಂದ. ಈಗಲೂ ಅವನಲ್ಲಿ ಏನೂ ಬದಲಾವಣೆ ಆಗಿಲ್ಲ. ಯಾರನ್ನೋ ಮದುವೆಯಾಗ್ತಾ ಇದಾನಂತೆ. ಅದಕ್ಕೆ ವಿಚ್ಛೇದನ ಬೇಕು ಅಂದ. ಪತ್ರಗಳಿಗೆ ಸಹಿ ಮಾಡಿಕೊಟ್ಟೆ."

"ನನ್ನ ತಂದೆಯ ಸ್ನೇಹಿತರೊಬ್ಬರು ವಕೀಲರಿದ್ದಾರೆ. ಅವರ ಸಹಾಯ ಪಡೆಯೋಣ. ಶಶಿಧರ ನಿನ್ನ ಮತ್ತು ಚಂದನಾಳ ಖರ್ಚುವೆಚ್ಚಗಳನ್ನು ಭರಿಸುವಂತೆ ದಾವೆ ಹೂಡೋಣ" ನಂದಿತಾ ಸಲಹೆ ಕೊಟ್ಟಳು.

"ಬೇಡ ನಂದಿತಾ, ಅವನ ಒಂದೇ ಒಂದು ಬಿಡಿಗಾಸೂ ನನಗೆ ಬೇಡ. ಅವನಿಂದ ಒಂದು ಕೂದಲಿನಷ್ಟೂ ಸಹಾಯ ಪಡೆಯದೆ ನಾನು ಬದುಕಿ ತೋರಿಸುತ್ತೇನೆ."

ನಂದಿತಾ ಸಂಜನಾಳ ಭುಜ ಒತ್ತಿದಳು.

"ನಿನ್ನ ನಿರ್ಧಾರ ಮೆಚ್ಚುತ್ತೇನೆ. ಆದರೂ ಈ ಸಮಾಜದಲ್ಲಿ ಒಂಟಿಯಾಗಿ ಜೀವನ ಎದುರಿಸುವುದು ಸವಾಲಿನ ಕೆಲಸ."

ಮೆಲ್ಲಗೆ ಮುಗುಳ್ನಕ್ಕ ಸಂಜನಾ, "ನಂದಿತಾ ನಾನು ಒಂಟಿಯಾಗಿ ಜೀವನ ಮಾಡಬೇಕೆಂದೇನೂ ನಿರ್ಧಾರಕ್ಕೆ ಬಂದಿಲ್ಲ. ಚಂದನಾಳಿಗೆ ಪ್ರೀತಿ ಕೊಡುವ ತಂದೆಯಾಗಿ ಯಾರಾದರೂ ಬಂದರೆ..."

ಕಣ್ಣರಳಿಸಿ ನಂದಿತಾ ಸಂಜನಾಳ ಮುಖವನ್ನೇ ನೋಡಿದಳು. ನಂದಿತಾಳ ಮುಖದಲ್ಲಿ ದೃಢ ನಿರ್ಧಾರ ಎದ್ದು ಕಾಣುತ್ತಿತ್ತು.

## ಮ.ಸೊ. ಹಾಲಸ್ವಾಮಿ

ಲೇಖಕರು ಭದ್ರಾವತಿ ತಾಲ್ಲೂಕಿನವವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಔಷಧ ತಯಾರಿಕಾ ಘಟಕಗಳಿಗೆ ತಾಂತ್ರಿಕ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ.

ಸುಮಾರು 30ಕ್ಕೂ ಹೆಚ್ಚು ಹಾಸ್ಯಕತೆಗಳು, 20ಕ್ಕೂ ಹೆಚ್ಚು ಕತೆಗಳು, 100ಕ್ಕೂ ಹೆಚ್ಚು ವ್ಯಂಗ್ಯಚಿತ್ರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ರಂಗಭೂಮಿಯಲ್ಲೂ ತೊಡಗಿಸಿಕೊಂಡಿದ್ದು, 'ಕಲಾಸಂಪದ' ಎಂಬ ಹವ್ಯಾಸಿ ರಂಗತಂಡದಲ್ಲಿ ಸಕ್ರಿಯರಾಗಿದ್ದಾರೆ. 'ಮಯೂರ'ದಲ್ಲಿ ಪ್ರಕಟವಾಗಿದ್ದ 'ಸುಂದ್ರವ್ವನ ಬ್ಯೂಟಿ ಪಾರ್ಲರ್' ಎಂಬ ಹಾಸ್ಯಕತೆ ನಾಟಕವಾಗಿ ರೂಪಾಂತರಗೊಂಡು ಹಲವು ಪ್ರದರ್ಶನಗಳನ್ನು ಕಂಡಿದೆ. 'ಫಜೀತಿ ಪ್ರಕರಣಗಳು', 'ಅವರ ಬಿಟ್ಟು ಇವರ ಬಿಟ್ಟು ಅವರ್‍ಯಾರು', 'ವನಮಾಲ' ಎಂಬ ನಾಟಕಗಳನ್ನು ರಚಿಸಿ, ನಿರ್ದೇಶಿಸಿದ್ದಾರೆ.